ಕರ್ನಾಟಕ ಸರ್ಕಾರ
Government of karnataka

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BANGALORE - 560 085
Email: dsert.kar@nic.in Website: http://dsert.kar.nic.in

ಡಿಎಸ್‌ಇಆರ್‌ಟಿ
DSERT

Phone : 080 - 26422372, 26422373, 26422374,
Fax - 26422377

ಸಂಖ್ಯೆ:ಡಿ.ಎಸ್.ಇ.ಆರ್.ಟಿ/ಇ.ಕ್ಯೂ.ಎಂ.ಸಿ(ಎಸ್.ಎಸ್.ಎ)ಶೈ.ಅ/31/2014-15 ದಿನಾಂಕ:15/07/2015

# ಸುತ್ತೋಲೆ

ವಿಷಯ:- ಶಿಕ್ಷಕರ ದೈನಂದಿನ ಬೋಧನಾ ಸಮಸ್ಯೆಗಳ ನಿವಾರಣೆಗೆ
**'ಶೈಕ್ಷಣಿಕ ಅದಾಲತ್'** ನಡೆಸುವ ಬಗ್ಗೆ.

ಪ್ರಸ್ತುತ ವೈಯಕ್ತಿಕ ಹಾಗು ಸೇವಾ ನಿಯಮಾವಳಿಗಳಿಗೆ ಸಂಬಂಧಿಸಿದಂತೆ ಇರುವ ಶಿಕ್ಷಕರ ಸಮಸ್ಯೆಗಳಿಗೆ ಪರಿಹಾರವನ್ನು ಶಿಕ್ಷಣ ಅದಾಲತ್ ಹಾಗು ಗುರುಸ್ಪಂದನ ಹೆಸರಿನಲ್ಲಿ ಜಿಲ್ಲಾ ಹಾಗು ಬ್ಲಾಕ್ ಹಂತಗಳಲ್ಲಿ ಸ್ಥಳದಲ್ಲಿಯೇ ಪರಿಹರಿಸಲಾಗುತ್ತಿದೆ. ಇದರಿಂದ ಅವರಿಗೆ ಬರಬೇಕಾದ ಸೇವಾ ಸವಲತ್ತುಗಳು ಸಕಾಲದಲ್ಲಿ ದೊರೆಯಲು ಸಹಕಾರಿಯಾಗಿ ನೆಮ್ಮದಿಯಿಂದ ಕೆಲಸ ಮಾಡಲು ಸಾಧ್ಯವಾಗಿರುತ್ತದೆ. ಸರ್ಕಾರ ಹೊಸ ಪಠ್ಯ ಕ್ರಮದ ವಿಷಯಗಳು, ಹೊಸ ಪಠ್ಯ ಪುಸ್ತಕದಲ್ಲಿನ ಹೊಸ ಪರಿಕಲ್ಪನೆಗಳು, ಹೊಸ ಬೋಧನಾ ವಿಧಾನಗಳನ್ನು ಜಾರಿ ತಂದ ಸಂದರ್ಭಗಳಲ್ಲಿ ಅವುಗಳನ್ನು ಅರ್ಥೈಸಿಕೊಂಡು ಮಕ್ಕಳಿಗೆ ಅನುಕೂಲಿಸಬೇಕಾಗಿರುತ್ತದೆ. ಎಲ್ಲಾ ಶಿಕ್ಷಕರಿಗೂ ಇಂತಹ ವೇಳೆ ತರಬೇತಿಗಳ ಮೂಲಕ ಹೊಸ ಪರಿಕಲ್ಪನೆ, ಹೊಸ ವಿಚಾರಗಳನ್ನು ಅರ್ಥೈಸಿಕೊಳ್ಳಲು ಅವಕಾಶ ಮಾಡಿಕೊಟ್ಟಿದ್ದರೂ, ಕೆಲವು ಶಿಕ್ಷಕರು ಹೊಸ ಪರಿಕಲ್ಪನೆಗಳನ್ನು ಅರ್ಥೈಸಿಕೊಂಡು ಪರಿಣಾಮಕಾರಿಯಾಗಿ ತರಗತಿ ಕೋಣೆಗಳಲ್ಲಿ ಮಕ್ಕಳಿಗೆ ಬೋಧನೆ ಮಾಡಲು ಸಮಸ್ಯೆ ಎದುರಿಸುತ್ತಿರುತ್ತಾರೆ. ಹೊಸ ವಿಷಯ, ವಿಚಾರ, ವಿಧಾನ, ಪರಿಕಲ್ಪನೆಗಳನ್ನು ಅರ್ಥೈಸಿಕೊಳ್ಳದೆ ತರಗತಿ ಕೋಣೆಗಳಲ್ಲಿ ಪಾಠ ಬೋಧನೆ ಮುಂದುವರೆಸಿದಲ್ಲಿ ಹೊಸ ಕಾರ್ಯಕ್ರಮಗಳ, ಹೊಸ ಪಠ್ಯ ಕ್ರಮದ ಜಾರಿ, ಅಳವಡಿಕೆ ಉದ್ದೇಶ ಈಡೇರಿದಂತಾಗುವುದಿಲ್ಲ. ಮಕ್ಕಳಿಗೆ ಹೊಸ ಆಶಯಗಳ ಸರಿಯಾದ ವಿಚಾರ ತಲುಪುವುದಿಲ್ಲ. ಕಾಲಕಾಲಕ್ಕೆ ನೀಡುತ್ತಿರುವ ಸೇವಾ ನಿರತ ತರಬೇತಿ ನಂತರವೂ ಕೆಲವು ಶಿಕ್ಷಕರು ಸರಿಯಾಗಿ ಅರ್ಥೈಸಿಕೊಳ್ಳದೆ ಇರುವುದರ ಪರಿಣಾಮವಾಗಿ, ಹೊಸ ವಿಚಾರಗಳಲ್ಲಿ ಕಲಿಸಲು ಶಿಕ್ಷಕರಿಗೆ ತೊಂದರೆಯಾಗಿದೆ. ಇಂತಹ ವಿಷಯಗಳಲ್ಲಿ ಶಿಕ್ಷಕರಿಗೆ ಸಂಪನ್ಮೂಲ ವ್ಯಕ್ತಿಗಳಿಂದ ಮಾರ್ಗದರ್ಶನ ದೊರಕಿಸುವುದು ಅಗತ್ಯವೆಂದು ಪರಿಗಣಿಸಿ, **"ಶೈಕ್ಷಣಿಕ ಅದಾಲತ್"** ಎಂಬ ನೂತನ ಶೈಕ್ಷಣಿಕ ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿದೆ.

- ಈ ಕಾರ್ಯಕ್ರಮವನ್ನು ಜಿಲ್ಲೆಯಲ್ಲಿನ ಉಪನಿರ್ದೇಶಕರು (ಆಡಳಿತ) ಹಾಗು (ಅಭಿವೃದ್ಧಿ) ರವರ ಜಂಟಿ ನೇತೃತ್ವದಲ್ಲಿ ಅನುಷ್ಠಾನಗೊಳಿಸುವುದು.
- ಜಿಲ್ಲಾ ಕೇಂದ್ರಗಳಲ್ಲಿನ ಡಯಟ್ ಅಥವಾ ಡಯಟ್ ನಿಗದಿ ಪಡಿಸುವ ಸ್ಥಳಗಳಲ್ಲಿ ಅದಾಲತ್ ನಡೆಸಲು ಪ್ರಾಂಶುಪಾಲರು, ಡಯಟ್ ಇವರು ವ್ಯವಸ್ಥೆ ಮಾಡಿ ಉಸ್ತುವಾರಿ ವಹಿಸಬೇಕು.
- ತಾಲ್ಲೋಕು ಕೇಂದ್ರಗಳಲ್ಲಿ ಬಿ.ಆರ್.ಸಿ ಗಳಲ್ಲಿ ಅಥವಾ ಬಿ.ಇ.ಓ ನಿಗದಿ ಪಡಿಸುವ ಸ್ಥಳದಲ್ಲಿ ಅದಾಲತ್ ನಡೆಸಲು ಬಿ.ಇ.ಓ ಅಥವಾ ಬಿ.ಆರ್.ಸಿ ಗಳು ವ್ಯವಸ್ಥೆ ಮಾಡಿ ಉಸ್ತುವಾರಿ ವಹಿಸಬೇಕು.

- ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ತ್ರೈಮಾಸಿಕವಾಗಿ- 4 ಬಾರಿ (ಶನಿವಾರದಂದು) ವಿವಿಧ ವಿಷಯಗಳಿಗೆ ಸಂಬಂಧಿಸಿದ ತಜ್ಞರು / ಸಂಪನ್ಮೂಲ ಶಿಕ್ಷಕರು / ಸಂಪನ್ಮೂಲ ವ್ಯಕ್ತಿಗಳು, ಶೈಕ್ಷಣಿಕ ಸಮಸ್ಯೆ ಇರುವ ಶಿಕ್ಷಕರೊಂದಿಗೆ ಮುಖಾಮುಖಿಯಾಗಿ ಕುಳಿತು ಪರಸ್ಪರ ಚರ್ಚಿಸಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು.
- ಇದು ಒಂದು ತರಗತಿ ಕೋಣೆಯಲ್ಲಿ ಎಲ್ಲರನ್ನೂ ಒಟ್ಟಿಗೆ ಕೂರಿಸಿ ನೀಡುವ ಉಪನ್ಯಾಸವಾಗಬಾರದು. ಇದು ಮುಖಾಮುಖಿಯಾಗಿದ್ದು ಸಂಪನ್ಮೂಲ ವ್ಯಕ್ತಿ ಮತ್ತು ಸಮಸ್ಯೆ ಇರುವ ಶಿಕ್ಷಕರು ಮಾತ್ರ ಸಮಸ್ಯಾತ್ಮಕ ವಿಷಯದ ಬಗ್ಗೆ ಪರಸ್ಪರ ಚರ್ಚೆ ಮಾಡಿ ಪರಿಹಾರ ಕಂಡು ಕೊಳ್ಳಬೇಕು.
- ಪ್ರತಿ ವಿಷಯಕ್ಕೆ ಸಂಬಂಧಿಸಿದಂತೆ ಕೊಠಡಿ ವ್ಯವಸ್ಥೆ ಕಲ್ಪಿಸಿ ಅದರಲ್ಲಿ ಸಂಪನ್ಮೂಲ ಶಿಕ್ಷಕರು/ಸಂಪನ್ಮೂಲ ವ್ಯಕ್ತಿಗಳು ಇರುವಂತೆ ವ್ಯವಸ್ಥೆ ಮಾಡಬೇಕು. (ಕನ್ನಡ ಇಂಗ್ಲೀಷ್, ಹಿಂದಿ, ಗಣಿತ, ವಿಜ್ಞಾನ, ಸಮಾಜ ವಿಜ್ಞಾನ, ದೈ.ಶಿ ಮತ್ತು ವೃತ್ತಿ ಶಿಕ್ಷಣ, ನಲಿ ಕಲಿ, ಸಿ.ಸಿ.ಇ ಇತ್ಯಾದಿ) ಯಾವುದೇ ನಿರ್ದಿಷ್ಟ ಒಂದೇ ವಿಷಯದಲ್ಲಿ ಶೈಕ್ಷಣಿಕ ಅದಾಲತ್ ಮಾಡುವುದಾದಲ್ಲಿ ಆ ವಿಷಯವನ್ನು ಮೊದಲೇ ಪ್ರಚುರ ಪಡಿಸಬೇಕು. ಅದಕ್ಕೆ ತಕ್ಕಂತೆ ಸಂಪನ್ಮೂಲ ವ್ಯಕ್ತಿಗಳನ್ನು ವ್ಯವಸ್ಥೆ ಮಾಡಬೇಕು.
- ಈ ಉದ್ದೇಶಕ್ಕೆ ತಾಲ್ಲೂಕು ಕೇಂದ್ರದಲ್ಲಿರುವ ಬಿ.ಆರ್.ಸಿಯಲ್ಲಿ ಅಗತ್ಯ ಜಾಗವಿಲ್ಲದಿದ್ದಲ್ಲಿ ಒಂದು ಪ್ರೌಢಶಾಲೆಯನ್ನು ಆಯ್ಕೆ ಮಾಡಬೇಕು. ಈ ಕೊಠಡಿಯಲ್ಲಿ ಸಂಪನ್ಮೂಲ ವ್ಯಕ್ತಿ ಮತ್ತು ಶಿಕ್ಷಕರು ಪರಸ್ಪರ ಕುಳಿತು ಚರ್ಚಿಸಲು ವ್ಯವಸ್ಥೆ ಮಾಡಬೇಕು.
- ಶನಿವಾರ ಮಧ್ಯಾಹ್ನ 2 ಗಂಟೆ ನಂತರ ಪ್ರಾರಂಭಿಸಬೇಕು. ಸದರಿ ಕೇಂದ್ರಕ್ಕೆ ಬಂದು ನೋಂದಾಯಿಸಿಕೊಂಡ ಎಲ್ಲಾ ಶಿಕ್ಷಕರ ಸಮಸ್ಯೆ ಇತ್ಯರ್ಥವಾಗುವವರೆಗೆ ಅದಾಲತ್ ನಡೆಸಬೇಕು. ಯಾವುದೇ ಶಿಕ್ಷಕರಿಗೆ ಕಡ್ಡಾಯವಾಗಿ ಬರಲೇಬೇಕೆಂದು ಒತ್ತಾಯಿಸಬಾರದು. ಸಮಸ್ಯೆ ಇರುವ ಶಿಕ್ಷಕರು ಮಾತ್ರ ಈ ಅವಕಾಶವನ್ನು ಸ್ವಇಚ್ಛೆಯಿಂದ ಉಪಯೋಗಿಸಿಕೊಂಡು ಅವರಿಗೆ ಇರುವ ಸಮಸ್ಯೆಗೆ ಪರಿಹಾರ ಕಂಡು ಕೊಳ್ಳಬಹುದಾಗಿದೆ.
- ಶಿಕ್ಷಕರು ಈ ಕೇಂದ್ರದಲ್ಲಿ ಅವರಿಗೆ ಸಮಸ್ಯೆ ಇರುವ ವಿಷಯದ ಆಧಾರದ ಮೇಲೆ ಆಯಾ ವಿಷಯದ ಕೊಠಡಿಯಲ್ಲಿ ಅವರ ಹೆಸರನ್ನು ನೋಂದಾಯಿಸಬೇಕು.
- ಈ ನೊಂದಣಿ ನಮೂನೆಯಲ್ಲಿ ಶಿಕ್ಷಕರ ವಿಳಾಸ, ಸಮಸ್ಯೆ ಇರುವ ವಿಷಯ, ತರಗತಿ ಘಟಕ & ನಿರ್ದಿಷ್ಟ ಸಮಸ್ಯೆ ಇವುಗಳ ಬಗ್ಗೆ ಪ್ರತ್ಯೇಕ ನಮೂದಿಸಬೇಕು.
- ಈ ಉದ್ದೇಶಕ್ಕೆ ವಿಷಯ ಶಿಕ್ಷಕರು/ ಸಂಪನ್ಮೂಲ ಶಿಕ್ಷಕರನ್ನು ಪೂರ್ಣಪ್ರಮಾಣದಲ್ಲಿ ಸಿದ್ಧಗೊಳಿಸಬೇಕು. ಇವರು ಶಿಕ್ಷಕರ ಸಮಸ್ಯೆ ಆಲಿಸಿ ಅಲ್ಲಿಯೇ ಪರಿಹಾರ ನೀಡಲು ಸಮರ್ಥರಿರುವಂತಿರಬೇಕು.(ಕನಿಷ್ಠ ಪ್ರತಿವಿಷಯಕ್ಕೆ ಇಬ್ಬರು ಇರಬೇಕು)
- ಶಿಕ್ಷಕರ ಅರ್ಜಿಯಲ್ಲಿರುವ ವಿಷಯ ಹಾಗು ಘಟಕ, ಸಮಸ್ಯೆ ಬಗ್ಗೆ & ನೀಡಿದ ಪರಿಹಾರ ಬಗ್ಗೆ ಈ ಕೆಳಕಂಡಂತೆ ವಹಿ ನಿರ್ವಹಣೆ ಮಾಡುವುದು. ಸಾಫ್ಟ್ ಪ್ರತಿಯನ್ನು ಸಿದ್ಧ ಪಡಿಸಬೇಕು.

| ಕ್ರ ಸಂ | ಶಿಕ್ಷಕರ ಹೆಸರು ಮತ್ತು ವಿಳಾಸ | ತರಗತಿ | ವಿಷಯ | ಬೋಧನಾ ಸಮಸ್ಯೆ/ ಪ್ರಶ್ನೆ ವಿವರ | ಸಂಪನ್ಮೂಲ ವ್ಯಕ್ತಿಗಳು ನೀಡಲಾದ ಮಾರ್ಗದರ್ಶನ | ಷರಾ |
|---|---|---|---|---|---|---|
| | | | | | | |

- ಸಂಪನ್ಮೂಲ ವ್ಯಕ್ತಿಗಳು ಈ ನಮೂನೆಯಲ್ಲಿ ವಿವರ ನಮೂದಿಸಿ ಶಿಕ್ಷಕರ ಅರ್ಜಿಯೊಂದಿಗೆ ತಾಲ್ಲೂಕು ಕೇಂದ್ರಗಳಲ್ಲಿ ಬಿ.ಆರ್.ಸಿ ರವರಿಗೆ ಕಾರ್ಯಕ್ರಮದ ನಂತರ ನೀಡಬೇಕು. ಬಿ.ಆರ್.ಸಿ.ರವರು ಮರುದಿನವೇ ಡಯಟ್ ಪ್ರಾಂಶುಪಾಲರಿಗೆ ಕಳುಹಿಸಬೇಕು.

- ಈ ಬಗ್ಗೆ ತಾಲ್ಲೂಕುಗಳಲ್ಲಿ ಬಿ.ಇ.ಓ. ಬಿ.ಆರ್.ಸಿ. ಸಿ.ಆರ್.ಪಿಗಳು ವ್ಯಾಪಕ ಪ್ರಚಾರ ನೀಡಬೇಕು. ವಿಶೇಷವಾಗಿ ಆಡಳಿತ ವಿಚಾರಗಳಿಗೆ ಸಂಬಂಧಿಸಿದಂತೆ ಮುಖ್ಯ ಶಿಕ್ಷಕರುಗಳಿಗೆ, ಪ್ರಭಾರಿ ವ್ಯವಸ್ಥೆಯಲ್ಲಿರುವ ಹಿರಿಯ ಶಿಕ್ಷಕರುಗಳಿಗೆ ಶೈಕ್ಷಣಿಕ ಆದಾಲತ್‌ನಲ್ಲಿ ಆಡಳಿತದಲ್ಲಿ ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ಮಾರ್ಗದರ್ಶನ ನೀಡಲು ಕ್ರಮವಹಿಸಬಹುದಾಗಿದೆ.
- ಶಾಲೆಯಲ್ಲಿನ ಆಡಳಿತಾತ್ಮಕ ಪ್ರಮುಖ ಸಮಸ್ಯೆಗಳು, ಎಸ್.ಡಿ.ಎಂ.ಸಿ ನಿರ್ವಹಣೆ, ನಡವಳಿ ದಾಖಲೆ, ತಪಾಸಣೆ ಕಂಡಿಕೆಗಳಿಗೆ ಉತ್ತರಿಸುವುದರಲ್ಲಿನ ಸಮಸ್ಯೆ/ಶಾಲಾದಾಖಲಾತಿಗಳ ನಿರ್ವಹಣೆ ಬಗ್ಗೆ/ಲೆಕ್ಕ ಪತ್ರ ನಿರ್ವಹಣೆ./ನಗದುವಹಿ ನಿರ್ವಹಣೆ/ ಅಂಕವಹಿ ನಿರ್ವಹಣೆ/ ಕಂಪ್ಯೂಟರ್ ಬಳಕೆ ಇತ್ಯಾದಿ ಬಗ್ಗೆಯೂ ಸಹ ಮುಖ್ಯ ಶಿಕ್ಷಕರಿಗೆ ಮಾರ್ಗದರ್ಶನ ಮಾಡಲು ಅವಕಾಶ ಕಲ್ಪಿಸುವುದು ಇದಕ್ಕೆ ಸಂಬಂಧಿಸಿದಂತೆ ಅನುಷ್ಠಾನಾಧಿಕಾರಿಗಳು/ ಮೇಲ್ವಿಚಾರಕರನ್ನು ಮಾರ್ಗದರ್ಶಕರನ್ನಾಗಿ ನೇಮಿಸುವುದು.
- ಈ ಮೇಲಿನ ಸೂಚನೆಗಳಂತೆ ಶೈಕ್ಷಣಿಕ ಸಮಸ್ಯೆಗಳಿಗೆ ಪರಿಹಾರ ಬಯಸುವ ಶಿಕ್ಷಕರುಗಳಿಗೆ ಬ್ಲಾಕ್ ಮಟ್ಟದಲ್ಲಿ ಒಂದು ವೇದಿಕೆಯನ್ನು ಒದಗಿಸಿ ಶೈಕ್ಷಣಿಕ ಮಾರ್ಗದರ್ಶನ ಮಾಡಲು ಇದು ಸಹಕಾರಿಯಾಗಬಹುದೆಂದು ಆಶಿಸಿದ್ದು ಇದನ್ನು ಜಿಲ್ಲೆಗಳಲ್ಲಿ ಆಯಾ ಉಪನಿರ್ದೇಶಕರು (ಆಡಳಿತ) ಮತ್ತು (ಅಭಿವೃದ್ಧಿ) ಇವರು ಜಂಟಿಯಾಗಿ ನೇತೃತ್ವ ವಹಿಸಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಈ ಮೂಲಕ ತಿಳಿಸಿದೆ. ಈ ಬಗ್ಗೆ ಕಾರ್ಯಕ್ರಮದ ನಂತರ ಉಪನಿರ್ದೇಶಕರು (ಅಭಿವೃದ್ಧಿ) ರವರು ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, (ಡಿ.ಎಸ್.ಇ.ಆರ್.ಟಿ) ಬೆಂಗಳೂರು, ಇವರಿಗೆ ವರದಿ ಮಾಡಲು ಸೂಚಿಸಿದೆ.

24/7/

(ಕೆ.ಎಸ್.ಸತ್ಯಮೂರ್ತಿ)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಂಗಳೂರು

ಇವರಿಗೆ,

ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಮತ್ತು ಉಪನಿರ್ದೇಶಕರು (ಅಭಿವೃದ್ಧಿ) ಇವರಿಗೆ ಅಗತ್ಯ ಕ್ರಮಕ್ಕಾಗಿ.
ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳು ಇವರಿಗೆ ಅಗತ್ಯ ಕ್ರಮಕ್ಕಾಗಿ.

ಪ್ರತಿಯನ್ನು ಮಾಹಿತಿಗಾಗಿ.

1. ರಾಜ್ಯ ಯೋಜನಾ ನಿರ್ದೇಶಕರು, ಸ.ಶಿ.ಅ. ಬೆಂಗಳೂರು
2. ಅಪರ ಆಯುಕ್ತರು, ಸಾ.ಶಿ.ಇ. ಗುಲ್ಬರ್ಗಾ ಮತ್ತು ಬೆಳಗಾವಿ
3. ರಾಜ್ಯದ ಎಲ್ಲಾ ನಿರ್ದೇಶಕರುಗಳಿಗೆ
4. ರಾಜ್ಯದ ಎಲ್ಲಾ ಸಹನಿರ್ದೇಶಕರುಗಳಿಗೆ
5. ಎಲ್ಲಾ ಸಿ.ಟಿ.ಇ ಕಾಲೇಜು ಪ್ರಾಂಶುಪಾಲರುಗಳಿಗೆ
6. ಕಛೇರಿ ಪ್ರತಿ.